ಸ್ಥಾಪಿಸಲು ಶೇ.50%ರಷ್ಟು (ಗರಿಷ್ಠ ` 2.50ಕೋಟಿ) ಸಹಾಯಧನ ನೀಡಲು ಅವಕಾಶವಿರುತ್ತದೆ.

ಈ ಯೋಜನೆಗಳಿಗೆ ಪೂರಕವಾಗಿ ಆಹಾರ ಸಂಸ್ಕರಣೆ ಬಗ್ಗೆ ಅರಿವು ಮೂಡಿಸುವ/ತಿಳುವಳಿಕೆ ನೀಡುವ ಕಾರ್ಯಕ್ರಮ, ಉದ್ಯಮ ಶೀಲತೆ ಅಭಿವೃದ್ಧಿ ಕಾರ್ಯಕ್ರಮ, ಆಹಾರ ಸಂಸ್ಕರಣೆಯಲ್ಲಿ ತರಬೇತಿ, ವಿಚಾರಗೋಷ್ಠಿ/ಕಾರ್ಯಾಗಾರ ಮುಂತಾದ ಕಾರ್ಯಕ್ರಮಗಳಿಗೆ ಸಹಾಯಧನ ನೀಡಲಾಗುತ್ತಿದೆ.

ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ

256(439); ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ರಾಜ್ಯದ ಹಲವು ಭಾಗಗಳಲ್ಲಿ ರೈತರುಗಳು ಕೃಷಿ ಚಟುವಟಿಕೆಗಾಗಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದು ಕೃಷಿ ಚಟುವಟಿಕೆ ನಡೆಸುತ್ತಿದ್ದು, ರೈತರಹಿತದೃಷ್ಟಿಯಿಂದ ಅಕ್ರಮವಾಗಿ ವಿದ್ಯುತ್ ಪಡೆದುಕೊಂಡಿರುವ ಪಂಪ್ ಸೆಟ್‌ಗಳಿಗೆ ಅಕ್ರಮ ಸಕ್ರಮ ಯೋಜನೆಯನ್ನು ಜಾರಿಗೆ ತಂದು ಸಕ್ರಮಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಕಾಲ ಮಿತಿಯೊಳಗೆ ಅಕ್ರಮ–ಸಕ್ರಮ ಯೋಜನೆಯನ್ನು ಜಾರಿಗೆ ತರಲಾಗುವುದು (ವಿವರ ನೀಡುವುದು);?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಅಕ್ರಮ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮೀಕರಿಸುವ ಯೋಜನೆಯು ದಿನಾಂಕ:31–07–2012 ಕ್ಕೆ ಅಂತ್ಯಗೊಂಡಿದ್ದು, ಯೋಜನೆಯ ವಿಸ್ತರಣೆಯ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ ಈ ಹಿನ್ನೆಲೆಯಲ್ಲಿ ಐಚ್ಛಿಕವಾಗಿ ಜಾರಿಯಲ್ಲಿರುವ ಒ.ವೈ.ಟಿ ಹಾಗೂ ಅಕ್ರಮ ಸಕ್ರಮ ಯೋಜನೆಗಳ ಸಾಧಕ–ಬಾಧಕಗಳ ಬಗ್ಗೆ

ಕೂಲಂಕುಷವಾಗಿ ಪರಿಶೀಲಿಸಿ ಒಂದು ನಿರ್ದಿಷ್ಟ ಪರ್ಯಾಯ ಯೋಜನೆಯನ್ನು ಜಾರಿಗೆ ತರಲು ಪರಿಶೀಲಿಸಲಾಗುವುದು.

ಚಿಂಚೋಳಿಯಲ್ಲಿ ಕೃಷಿ ಡಿಪ್ಲೋಮ ಪ್ರಾರಂಭಿಸುವ ಬಗ್ಗೆ

257(440); ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ಚಿಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿ ತೋಟಗಾರಿಕಾ ತರಬೇತಿ ಕೇಂದ್ರದಲ್ಲಿ ಕೃಷಿ ಡಿಪ್ಲೋಮೊ ಕೋರ್ಸ್‌ನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು (ವಿವರ ನೀಡುವುದು)?

ಡಾ॥ ಶ್ಯಾಮನೂರ ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರಕ್ಟೆ ಸಚಿವರು.)

ಅ) ಚಿಂಚೋಳಿ ತಾಲ್ಲೂಕಿನ ಚಂದ್ರಪಳ್ಳಿ ತೋಟಗಾರಿಕಾ ತರಭೇತಿ ಕೇಂದ್ರದಲ್ಲಿ ಕೃಷಿ ಡಿಪ್ಲೋಮೊ ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಪ್ರಸ್ತುತ ಚಂದ್ರಂಪಳ್ಳಿ ತೋಟಗಾರಿಕಾ ತರಬೇತಿ ಕೇಂದ್ರದಲ್ಲಿ ಪ್ರತಿ ವರ್ಷ 10 ತಿಂಗಳ ಪ್ರಾಯೋಗಿಕ ತೋಟಗಾರಿಕೆ ತರಬೇತಿ ಕಾರ್ಯಕ್ರಮ ನಡೆಸಲಾಗುತ್ತಿದ್ದು, 2014–15ನೇ ಸಾಲಿನಲ್ಲಿ ಒಟ್ಟು 36 ಮಂದಿ ರೈತ ಮಕ್ಕಳಿಗೆ 10 ತಿಂಗಳ ತೋಟಗಾರಿಕೆ ತರಭೇತಿ ನೀಡುವ ಕಾರ್ಯಕ್ರಮವನ್ನು ಜೂನ್–2014 ಮಾಹೆಯಿಂದ ಮಾರ್ಚ್– 2015ರ ಮಾಹೆಯವರೆಗೆ ಹಮ್ಮಿಕೊಳ್ಳಲಾಗಿದೆ.

ಮುಂದುವರೆದು, ರಾಯಚೂರಿನ ಕೃಷಿ ವಿಶ್ವವಿದ್ಯಾ ನಿಲಯದಲ್ಲಿ ಕೃಷಿ ಡಿಪ್ಲೋಮೋ ಕೋರ್ಸ್ ಪ್ರಾರಂಭಿಸಲಾಗಿದೆ. ಹಾಗೂ ತೋಟಗಾರಿಕೆ ವಿಶ್ವ ವಿದ್ಯಾನಿಲಯ, ಬಾಗಲಕೋಟೆ ಇಲ್ಲಿಯೂ ಸಹಾ ತೋಟಗಾರಿಕಾ ಡಿಪ್ಲೋಮೋ ಕೋರ್ಸ್ ಅನ್ನು ನಡೆಸಲಾಗುತ್ತಿದೆ.